## 2

# ವಿಧೇಯತೆಯ ಕುರಿತ ಬೈಬಲ್‌ನ ಉದಾಹರಣೆಗಳು

ನಾವೆಲ್ಲರೂ ಆತನನ್ನು ಕೇಳಿ ವಿಧೇಯರಾಗಬೇಕೆಂದು ದೇವರು ಬಯಸುತ್ತಾನೆ (ವಿಮೋಚನಕಾಂಡ 19:5; ಧರ್ಮೋಪದೇಶಕಾಂಡ 11:27, 28; 13:4; 27:10; ಮತ್ತಾಯ 7:21; ಇಬ್ರಿಯ 5:9). ನಾವು ಆತನನ್ನು ಅಪಾರ್ಥಮಾಡಿಕೊಳ್ಳದಂತೆ, ನಂಬಿಗಸ್ಥರಾದ, ದೈವ ಭಕ್ತರ ಹಾಗು ಅವಿಧೇಯರಾದ ಜನರ ಉದಾಹರಣೆಗಳನ್ನು ತಿಳಿಸಿ ವಿಧೇಯತೆ ಮತ್ತು ಅವಿಧೇಯತೆಯಿಂದ ಉಂಟಾಗುವ ಪರಿಣಾಮಗಳ ಬಗ್ಗೆ ತಿಳಿಸಿರುವನು ಪೌಲನು ಬರೆದು, "ಅವರು ಕೆಟ್ಟ ವಿಷಯಗಳನ್ನು ಆಶಿಸಿದಂತೆ ನಾವು ಆಶಿಸುವರಾಗಬಾರದೆಂಬುದಕ್ಕಾಗಿ ಈ ಸಂಗತಿಗಳು ನಮಗೆ ನಿದರ್ಶನಗಳಾಗಿವೆ" (1 ಕೊರಿಂಥ 10:6). ಅವನು ಮುಂದುವರೆದು ಹೇಳಿದ್ದೇನೆಂದರೆ, "ಅವರಿಗೆ ಸಂಭವಿಸಿದ ಈ ಸಂಗತಿಗಳು ನಿದರ್ಶನರೂಪವಾಗಿವೆ, ಮತ್ತು ಯುಗಾಂತ್ಯಕ್ಕೆ ಬಂದಿರುವವರಾದ ನಮಗೆ ಬುದ್ಧಿವಾದಗಳಾಗಿ ಬರೆದವೆ" (1 ಕೊರಿಂಥ 10:11).

ಹಳೇ ಒಡಂಬಡಿಕೆಯಿಂದ ಕೆಲವು ನಿದರ್ಶನಗಳನ್ನು ಗಮನಿಸೋಣ.

### ಹೇಬೆಲನು

ಕಾಯಿನನನ್ನು ಮತ್ತು ಹೇಬೆಲನನ್ನು ಸೂಚಿಸುವದಕ್ಕಾಗಿ "ಅವಿಧೇಯತೆ" ಮತ್ತು ವಿಧೇಯತೆಯ ಪದಗಳನ್ನು ಉಪಯೋಗಿಸಿರುವದಿಲ್ಲ, ಆದರೆ ಅವಿಧೇಯತೆ ಹಾಗು ವಿಧೇಯತೆಯ ಸಾಕ್ಷಾಧಾರಗಳು ಮಾತ್ರ ಇರುತ್ತವೆ.

> ಕಾಲಾಂತರದಲ್ಲಿ ಕಾಯಿನನು ಹೊಲದ ಬೆಳೆಯಲ್ಲಿ ಕೆಲವನ್ನು ತಂದು ಯೆಹೋವನಿಗೆ ಕಾಣಿಕೆಯಾಗಿ ಸಮರ್ಪಿಸಿದನು. ಹೇಬೆಲನು ಹಾಗೆಯೇ ತನ್ನ ಹಿಂಡಿನಿಂದ ಚೊಚ್ಚಲ ಕುರಿಗಳನ್ನು ಕಾಣಿಕೆಯಾಗಿ ತಂದು ಅವುಗಳ ಕೊಬ್ಬನ್ನು ಹೋಮಮಾಡಿದನು. ಯೆಹೋವನು ಹೇಬೆಲನನ್ನೂ ಅವನ ಕಾಣಿಕೆಯನ್ನೂ ಮೆಚ್ಚಿ ಕಾಯಿನನನ್ನೂ ಅವನ ಕಾಣಿಕೆಯನ್ನೂ ಮೆಚ್ಚಲಿಲ್ಲ (ಆದಿಕಾಂಡ 4:3-5ಎ).

ಹೇಬೆಲನ ಕುರಿತಾಗಿ,

> ನಂಬಿಕೆಯಿಂದಲೇ ಹೇಬೆಲನು ಕಾಯಿನನ ಯಜ್ಞಕ್ಕಿಂತ ಶ್ರೇಷ್ಠವಾದ ಯಜ್ಞವನ್ನು ದೇವರಿಗೆ ಸಮರ್ಪಿಸಿದನು. ಅದರ ಮೂಲಕ ತಾನು ನೀತಿವಂತನೆಂದು ಸಾಕ್ಷಿ ಹೊಂದಿದನು; ದೇವರು ಅವನ ಕಾಣಿಕೆಗಳನ್ನು ಅಂಗೀಕಾರಮಾಡಿದ್ದೇ ಆ ಸಾಕ್ಷಿ. ಅವನು ಸತ್ತಿದ್ದರೂ ಅವನ ನಂಬಿಕೆಯ ಮೂಲಕ ಇನ್ನೂ ಮಾತಾಡುತ್ತಾನೆ (ಇಬ್ರಿಯ 11:4).

ಹೇಬೆಲನ ಕ್ರೀಯೆಗಳಲ್ಲಿ ವಿಧೇಯತೆಯನ್ನು ಕಾಣುತ್ತೇವೆ. ಅವನು ಕುರಿಗಳ ಹಿಂಡಿನಿಂದ ಚೊಚ್ಚಲಾದವುಗಳನ್ನು ತಂದು ಅವುಗಳ ಕೊಬ್ಬನ್ನು ಹೋಮಮಾಡಿದನು. ಈ ದೇವರ ಮೇಲಿನ ನಂಬಿಕೆಯ ಕ್ರಿಯೆಯಿಂದ, ದೇವರು ಗೌರವಿಸುವಂತ ಯಜ್ಞದ ಕಾಣಿಕೆಯನ್ನು ಅರ್ಪಿಸಿದನು. ಆತನ ಮೇಲಿನ "ನಂಬಿಕೆಗೆ" ಅವನು ನಿದರ್ಶನವಾಗಿದ್ದಾನೆಂದು ದೇವರು ಅರ್ಥೈಸಿದನು - ಅವನು ದೇವರ ವಾಕ್ಯವನ್ನು ಒಪ್ಪಿಕೊಂಡು ಮತ್ತು ಆತನ ಆಜ್ಞೆಗಳನ್ನು ಪಾಲಿಸುವ ಮೂಲಕ ಪ್ರತಿಕ್ರಿಯೆ ನೀಡಿದನು.

ದೇವರಿಂದ ಅಧಿಕೃತ ಗೊಂಡಂತ ಪ್ರಾಣಿಯನ್ನು ಹೇಬೆಲನು ದೇವರಿಗೆ ಅರ್ಪಿಸಿದನು, ಈ ಕಾರ್ಯವು ಧರ್ಮಶಾಸ್ತ್ರವನ್ನು ಪಡೆಯುವ ಮೊದಲೇ ಮಾಡಲಾಗಿತ್ತು (ಆದಿಕಾಂಡ 8:20; 22:9-13; ಯೋಬ 42:7-9; ವಿಮೋಚನಕಾಂಡ 10:25, 26). ಮೋಶೆಯ ಮೂಲಕ ಇಸ್ರಾಯೇಲ್ಯರಿಗೆ ಧರ್ಮಶಾಸ್ತ್ರವನ್ನು ಪ್ರಕಟಿಸಿದಾಗ, ಇಸ್ರಾಯೇಲ್ಯರು ದಾನ್ಯ ನೈವೇದ್ಯವನ್ನು ಮಾಡಬಹುದಾಗಿತ್ತು (ಯಾಜಕಕಾಂಡ 2:1-16; 5:11-13; 6:14-23; 7:11-14).

ದೇವರು ಪ್ರಕಟಿಸಿರುವದನ್ನೆ ಯಜ್ಞಮಾಡುವದಕ್ಕೆ ಕಾಯಿನ ಮತ್ತು ಹೇಬೆಲರು ತಿಳಿದಿದ್ದರು. ದೇವರು *ಏನನ್ನು* ಬಯಸಿದ್ದನೆಂಬುದಾಗಿ ಅರಿಯದೇ ಹೇಬೆಲನು ನಂಬಿಕೆಯ ಕ್ರಿಯೆಯನ್ನು ಮಾಡುವದಕ್ಕೆ ಹೇಗೆ ಸಾಧ್ಯವಾಯಿತು ರೋಮಾಪುರ 10:17ರಲ್ಲಿ ಇದಕ್ಕೆ ಸಾಕ್ಷಿಯಾಗಿ, ಹೇಳುವದೇನೆಂದರೆ, "ಆದಕಾರಣ ಸಾರಿದವಾರ್ತೆಯು ನಂಬಿಕೆಗೆ ಆಧಾರ, ಆ ವಾರ್ತೆಗೆ ಕ್ರಿಸ್ತನ ವಾಕ್ಯವೇ ಆಧಾರ" ಇಬ್ರಿಯ 11ರಲ್ಲಿ ಇರುವವರು ದೇವರ ಮೇಲಿನ ನಂಬಿಕೆಯಿಂದ ಕ್ರಿಯೆಗಳನ್ನು ಮಾಡಿದ್ದರಿಂದ ಅವರನ್ನು "ಯಶಸ್ವಿಯಾದ ವ್ಯಕ್ತಿಗಳು" ಎಂದು ಕರೆಯಲ್ಪಟ್ಟರು. ಇವರ ಪಟ್ಟಿಯಲ್ಲಿ ನೋಹ (ವಚನ 7), ಅಬ್ರಹಾಮ (ವಚನಗಳು 8, 9), ಮೋಶೆ (ವಚನಗಳು 24-29), ಮತ್ತು ಇತರರ ಹೆಸರುಗಳನ್ನು ಸೇರಿಸಲಾಗಿದೆ (ವಚನಗಳು 2-40 ನೋಡಿ).

ಕಾಯಿನ ಮತ್ತು ಹೇಬೆಲನ ದೃಷ್ಟಾಂತದ ನಡುವಿನಲ್ಲಿರುವ ವ್ಯತ್ಯಾಸವೇನೆಂದರೆ ವಿಧೇಯತೆಯಲ್ಲಿ ದೇವರು ಏನನ್ನು ಬಯಸುತ್ತಾನೆಂಬುದಾಗಿದೆ. ಹೇಗೂ ಅವರ ವ್ಯತ್ಯಾಸಗಳ ಒಬ್ಬನು ಬಯಸುವಂತಿರುವದಿಲ್ಲ. ಅವರಿಬ್ಬರೂ ದೇವರನ್ನು ನಂಬಿದರು ಆರಾಧಿಸಬೇಕೆಂದು ನಂಬಿದರು ದೇವರನ್ನು ಆರಾಧಿಸಲು ಮುಂದಾದರು. ದೇವರಿಗೆ ಹೋಮವನ್ನು ಮಾಡಬೇಕೆಂದು ತಿಳಿದು, ಯಜ್ಞವನ್ನು ಸಮರ್ಪಿಸಿದರು.

ಒಂದೇ *ಒಂದು* ವಿಷಯದಲ್ಲಿ ವ್ಯತ್ಯಾಸವುಂಟಾಯಿತು. ಹೇಬೆಲನ ಯಜ್ಞವು ದೇವರ ಬಯಕೆಯಂತಿತ್ತು, ಆದರೆ ಕಾಯಿನನು ದೇವರು ಗೌರವಿಸುವಂತ ಯಜ್ಞವನ್ನು ಸಮರ್ಪಿಸಲಿಲ್ಲ. ದೇವರು ಕೇವಲ *ಆರಾಧನೆಯನ್ನು* ಬಯಸದೆ ದೇವರ *ಆಜ್ಞೆಯ ಮೇರೆಗೆ ಅವರು ಆರಾಧಿಸಬೇಕೆಂದು* ಬಯಸಿದನು.

ದೇವರು ಅಧಿಕೃತ ಪಡಿಸಿರುವ ಮೇರೆಗೆ, ಆರಾಧನೆಯನ್ನು ಮಾಡುವಾಗ, ಒಬ್ಬ ವ್ಯಕ್ತಿಯು ಮಾಡಬಹುದಾದ ನೀತಿ ಕಾರ್ಯವೇನು? ದೇವರ ಪ್ರಕಟನೆಗೆ ವಿರುದ್ಧವಾಗಿ ಆರಾಧನೆ ಮಾಡುವವನು, ಪಾಪವನ್ನು ಮತ್ತು ಕೆಟ್ಟದ್ದನು ಮಾಡುವವನಾಗಿರುವನೇ? ಕಾಯಿನನ ಕಾಣಿಕೆಯು ತಿರಸ್ಕರಿಸಲ್ಪಟ್ಟಾಗ, ದೇವರು ಕಾಯಿನನಿಗೆ, "ಒಳ್ಳೆ ಕೆಲಸ ಮಾಡಿದರೆ ನನ್ನ ತಲೆ ಎತ್ತಲ್ಪಡುವದಲ್ಲವೇ; ಅಲ್ಲದಿದ್ದರೆ ಪಾಪವು ನಿನ್ನನ್ನು ಹಿಡಿಯಬೇಕೆಂದು ಬಾಗಲಲ್ಲಿ ಹೊಂಚಿಕೊಂಡಿರುವದು; ಅದರೂ ನೀನು ಅದನ್ನು ವಶಮಾಡಿಕೊಳ್ಳ ಬೇಕು ಎಂದು ಹೇಳಿದನು" (ಆದಿಕಾಂಡ 4:7; NKJV). ಕಾಯಿನನು ತನ್ನ ಕಾಣಿಕೆಯ ವಿಷಯದಲ್ಲಿ ಒಳ್ಳೆದನ್ನು ಮಾಡದೆ ಇದ್ದದ್ದರಿಂದ, ಪಾಪಮಾಡಿದನು.

ಕಾಯಿನನು ಹೇಬೆಲನನ್ನು ಕೊಂದು ಹಾಕಿದ ಕುರಿತು ಯೋಹಾನನು, "ತನ್ನ ಕೃತ್ಯಗಳು ಕೆಟ್ಟವುಗಳು ತನ್ನ ತಮ್ಮನ ಕೃತ್ಯಗಳು ನೀತಿಗೆ ಸರಿಯಾದವುಗಳು ಆಗಿದ್ದರಿಂದಲೇ" (1 ಯೋಹಾನ 3:12). ನೀತಿವಂತನಾದ ಹೇಬೆಲನು ದೇವರ ದೃಷ್ಟಿಯಲ್ಲಿ ಸರಿಯಾಗಿದ್ದ ಕಾಣಿಕೆಯನ್ನು ಸಮರ್ಪಿಸಿದನ್ನು ಕಾಯಿನನು ನೋಡಿ, ತನ್ನ ಕೃತ್ಯಗಳು ಕೆಟ್ಟವುಗಳಾಗಿದ್ದರಿಂದ, ಅವನು ಒಳ್ಳೆಯ ಕಾಣಿಕೆಯನ್ನು ಸಮರ್ಪಿಸಿರಲಿಲ್ಲ.

ಆರಾಧನೆಯಲ್ಲಿರುವ ದೇವರ ಇಚ್ಛೆಯನ್ನು ಓರೆ ಮಾಡಿ ನಾವು ನಮ್ಮ ಸ್ವಂತ ಇಚ್ಛೆಯನ್ನು ನಡಿಸುವುದಾದರೆ, ಮತ್ತು ಆತನ ಚಿತ್ತವನ್ನು ಮಾಡದೆ ಹೋದರೆ ನಾವು ಪಾಪಮಾಡಿದವರಾಗಿದ್ದೇವೆ.

ಕಾಯಿನನ ಮನೋಭಾವವು ಮಾತ್ರ ಕೆಟ್ಟದ್ದಾಗಿತ್ತು ಎಂದು ಕೆಲವರ ನಿರ್ಣಯ;

ಒಂದು ವೇಳೆ ಕೆಟ್ಟ ಮನೋಭಾವವು ಇರಬಹುದು, ಆದಾಗ್ಯೂ ಅವನ ಕಾಣಿಕೆಯನ್ನು ಮತ್ತು ಅವನನ್ನು ತಿರಸ್ಕರಿಸಲಾಯಿತು (ಆದಿಕಾಂಡ 4:5).

ಹೇಬೆಲನು ಸತ್ತಿದ್ದರೂ ಅವನ ನಂಬಿಕೆಯ ಮೂಲಕ ಇನ್ನು ಮಾತಾಡುತ್ತಾನೆ (ಇಬ್ರಿಯ 11:4).

## ನೋಹನು

ನೋಹನ ವಿಷಯದಲ್ಲಿ "ವಿಧೇಯತೆ" ಎಂಬ ಪದವನ್ನು ಉಪಯೋಗಿಸಿರುವದಲ್ಲ, ಅವನ ಕಾರ್ಯಗಳೇ, ಅವನ ವಿಧೇಯತೆಗೆ ಸಾಕ್ಷಿಯಾಗಿದ್ದವು. ಗ್ರಂಥಗಳಲ್ಲಿ ಅವನ ಕುರಿತಾಗಿ, "ನಂಬಿಕೆಯಿಂದಲೇ ನೋಹನು ಅದುವರೆಗೆ ಕಾಣದಿದ್ದ ಸಂಗತಿಗಳ ವಿಷಯವಾಗಿ ದೈವೋಕ್ತಿಯನ್ನು ಹೊಂದಿ ಭಯಭಕ್ತಿಯುಳ್ಳವನಾಗಿ ತನ್ನ ಮನೆಯವರ ಸಂರಕ್ಷಣೆಗೋಸ್ಕರ ನಾವೆಯನ್ನು ಕಟ್ಟಿ ಸಿದ್ಧಮಾಡಿದನು" (ಇಬ್ರಿಯ 11:7ಎ). ಹಾಗೂ "ದೇವರು ಅಪ್ಪಣೆಕೊಟ್ಟ ಪ್ರಕಾರವೇ ನೋಹನು ಮಾಡಿದನು" (ಆದಿಕಾಂಡ 6:22).

ನೋಹನು ವಿಧೇಯತೆಯ ಉತ್ತಮ ಉದಾಹರಣೆಯಾಗಿದ್ದಾನೆ. ದೇವರು ಅವನಿಗೆ ನಾವೆಯ ನಿರ್ಮಾಣದ ಕುರಿತಾಗಿ ಸವಿವರವಾದ ಪ್ರಕಟನೆಯನ್ನು ನೀಡದೆ ಹೋಗಿದ್ದರೆ, ನಾವೆಯ ರಚನೆಯನ್ನು ಅವನು ತಿಳಿಯಲು ಸಾಧ್ಯವಾಗುತ್ತಿರಲಿಲ್ಲ. ದೇವರು ಅವನಿಗೆ ನಾವೆಯ ಕುರಿತು ನಿರ್ದಿಷ್ಟವಾದ ಯೋಜನೆಯನ್ನು ನೀಡಿದನು, ದೇವರ ಯೋಜನೆಗೆ ತಕ್ಕ ಹಾಗೆ ನೋಹನು ನಾವೆಯನ್ನು ಕಟ್ಟಿದನು. ಜಲಪ್ರಳಯದ ಕುರಿತು ಅವನು ತಿಳಿದಿರಲಿಲ್ಲ: ಆದರೆ ನಂಬಿಕೆಯಿಂದ ಕಾರ್ಯ ಮಾಡಿದನು, ಪ್ರಳಯದ ಕುರಿತ ದೇವರ ವಾಗ್ದಾನವನ್ನು ನಂಬಿದನು.

ಆತನ ಅಪ್ಪಣೆಯ ಮೇರೆಗೆ, ದೇವರ ಯೋಜನೆಯನ್ನು ನೆರವೇರಿಸಿದನು, ಎಂಬ ವ್ಯಾಖ್ಯಾನವನ್ನು ನೋಡುತ್ತೇವೆ (ಆದಿಕಾಂಡ 6:22) ಅಂದರೆ ನಿಯಮವನ್ನು ಚಾಚುತಪ್ಪದೆ ಪಾಲಿಸಿದನು (ಅದಿಕಾಂಡ 6:14-16):

- ತುರಾಯಿ ಮರವನ್ನು ಉಪಯೋಗಿಸಿದನು.
- ಕೊಠಡಿಗಳನ್ನು ನಿರ್ಮಿಸಿದನು.
- ಹೊರಗೂ ಮತ್ತು ಒಳಗೂ ರಾಳವನ್ನು ಹಚ್ಚಿದನು.
- 300 ಮೊಳ ಉದ್ದದ (450 ಅಡಿಗಳು) ನಾವೆಯನ್ನು ಕಟ್ಟಿದನು.
- 50 ಮೊಳ ಅಗಲ (75 ಅಡಿಗಳು).
- 30 ಮೊಳ ಎತ್ತರ (45 ಅಡಿಗಳು).
- ನಾವೆಯ ಮೇಲ್ಭಾಗದಲ್ಲಿ ಒಂದು ಮೊಳದ ಕಿಟಕಿಯನ್ನು ಇಟ್ಟನು.
- ನಾವೆಯ ಬದಿಯಲ್ಲಿ ಬಾಗಿಲನ್ನು ಇಟ್ಟನು.

ಇದರ ಜೊತೆಯಲ್ಲಿ, ನೋಹ ಮತ್ತು ಅವನ ಹೆಂಡತಿ, ಗಂಡು ಮಕ್ಕಳು, ಮತ್ತು ಅವರ ಹೆಂಡತಿಯರನ್ನು ಆಹಾರವನ್ನು, ಪ್ರಾಣಿಗಳನ್ನು (ಶುದ್ಧಾ ಅಶುದ್ಧಾವಾದ ಸಂಖ್ಯೆಗೆ ಅನುಗುಣವಾದ ಪ್ರಾಣಿಗಳು) ಹಾಗೂ ದೇವರ ಅಪ್ಪಣೆಯ ಮೇರೆಗೆ ಬಂದ ಕ್ರಿಮಿಕೀಟ ಗಳನ್ನು ನಾವೆಯಲ್ಲಿ ಸೇರಿಸಿಕೊಂಡನು. ದೇವರ ಅಪ್ಪಣೆಯನ್ನು ಅವನು ತಪ್ಪದೆ ನೆರವೇರಿ ಸಿದ್ದರಿಂದ, ಅವನು ಉತ್ತಮ ನಿದರ್ಶನವಾಗಿರುವನು.

## ಅಬ್ರಹಾಮನು

ಅಬ್ರಹಾಮನು ವಿಧೇಯನಾದನು ಎಂಬ ಸುದ್ಧಿಯನ್ನು ನಾವು ತಿಳಿದಿರುವೆವು. ಗ್ರಂಥಗಳಲ್ಲಿ ಅವನ ಕುರಿತಾಗಿ, "ನಂಬಿಕೆಯಿಂದಲೇ ಅಬ್ರಹಾಮನು ಕರೆಯಲ್ಪಟ್ಟ ಕೂಡಲೆ ಕರೆದಾತನ

ಮಾತನ್ನು ಕೇಳಿ ತಾನು ಬಾದ್ಯವಾಗಿ ಹೊಂದಬೇಕಾಗಿದ್ದ ಸ್ಥಳಕ್ಕೆ ಹೊರಟುಹೋದನು; ತಾನು ಹೋಗಬೇಕಾದ ಸ್ಥಳವು ಯಾವದೆಂದು ತಿಳಿಯದೆ ಹೊರಟನು'' (ಇಬ್ರಿಯ 11:8).

ಅಬ್ರಹಾಮನು ದೇವರ ಮಾತಿಗೆ ವಿಧೇಯನಾಗಿ, ನಂಬಿಕೆಯಿಂದ ತನ್ನ ಸ್ಥಳವನ್ನು ಬಿಟ್ಟು ಹೊರಟನು. ತನ್ನ ಕುಟುಂಬವನ್ನು ಹಾಗೂ ತನ್ನ ಸ್ವಂತ ಊರನ್ನು ಬಿಟ್ಟು ತಾನು ಅರಿಯದ ದೇಶಕ್ಕೆ ನಂಬಿಕೆಯಿಂದ ಹೊರಟನು.

ವಯಕ್ತಿಕವಾದ ನಷ್ಟದ ನಡುವೆಯು, ತಾನು ಸೇರಬೇಕಾದ ಸ್ಥಳವನ್ನು ಅರಿಯದಿದ್ದರೂ, ಅವನು ಅಲ್ಲಿಗೆ ಏಕೆ ಹೋದನು ಎಂದು ಅರಿತವನಾಗಿ ಹೋದನು ಆದುದರಿಂದ, ಅವನ ಮೂಲಕವಾಗಿ ಎಲ್ಲಾ ಜನಾಂಗದವರು ಆಶೀರ್ವದಿಸಲ್ಪಡುವಂಥ ವಾಗ್ದಾನವನ್ನು ಹೊಂದಿದನು, ಅವನು ದೇವರ ಮಾರ್ಗದರ್ಶನದಂತೆ ಮುಂದುವರಿದನು, ಮತ್ತು ಅವನು ಸೇರಬೇಕಾದ ಪಟ್ಟಣದ ಕುರಿತಾಗಿ ದೇವರಿಂದ ಕಲಿತುಕೊಂಡನು.

ಯಾಕೋಬನು ಅಬ್ರಹಾಮನನ್ನು ನಿದರ್ಶನವನ್ನಾಗಿ ತೋರಿಸಿರುವನು: ''ನಮ್ಮ ಪಿತೃವಾದ ಅಬ್ರಹಾಮನು ಇಸಾಕನೆಂಬ ತನ್ನ ಮಗನನ್ನು ಯಜ್ಞವೇದಿಯ ಮೇಲೆ ಅರ್ಪಿಸಿದಾಗ ನೀತಿವಂತನೆಂಬ ನಿರ್ಣಯವನ್ನು ಹೊಂದಿದ್ದು ಕ್ರಿಯೆಗಳಿಂದಲ್ಲವೇ'' (ಯಾಕೋಬ 2:21, 22), ಅದರಿಂದ ಅವನ ನಂಬಿಕೆಯು ಸಿದ್ಧಿಗೆ ಬಂತ, ನಂಬಿಕೆಯಿಂದಲೇ ಅಬ್ರಹಾಮನು, ತನ್ನ ಮಗನಾದ ಇಸಾಕನನ್ನು ಅರ್ಪಿಸಲು ಮುಂದಾದನು (ಇಬ್ರಿಯ 11:17). ಅವನು ನಂಬಿಕೆ ಮತ್ತು ಕ್ರಿಯೆಗಳಿಂದ ಈ ಮುಂದಿನ ಸಂಗತಿಗಳನ್ನು ಮಾಡಿದನು:

- ಅವನು ಕಾರ್ಯಪ್ರವೃತ್ತನಾದನು (ಆದಿಕಾಂಡ 22:3).
- ದೇವರ ಅಪ್ಪಣೆಯ ಮೇರೆಗೆ ಇಷ್ಮಾಯೇಲನನ್ನು ಕರಕೊಂಡು ಹೋಗದೆ ಇಸಾಕನನ್ನೆ ಕರಕೊಂಡು ಹೋದನು (ಆದಿಕಾಂಡ 22:2, 3).
- ಅವನು ಮೋರೀಯ ಬೆಟ್ಟಕ್ಕೆ ಹೋದನು (ಆದಿಕಾಂಡ 22:2).
- ದೇವರು ಆಯ್ಕೆ ಮಾಡಿದ ಬೆಟ್ಟಕ್ಕೆ ಹೋದನು (ಆದಿಕಾಂಡ 22:2, 4).
- ಕಟ್ಟಿಗೆಯನ್ನು ಯಜ್ಞಕ್ಕೆ ಬೇಕಾದ ವಸ್ತುಗಳನ್ನು ತೆಗೆದುಕೊಂಡು ಹೋದನು (ಆದಿಕಾಂಡ 22:2, 3).
- ಬೆಂಕಿಯನ್ನು ತೆಗೆದು ಕೊಂಡನು (ಆದಿಕಾಂಡ 22:6).
- ಯಜ್ಞಮಾಡಲು ಕತ್ತಿಯನ್ನು ಹೊಯ್ದನು (ಆದಿಕಾಂಡ 22:6).
- ಯಜ್ಞಕ್ಕೆ ಕುರಿಮರಿಯನ್ನು ತೆಗೆದುಕೊಂಡು ಹೋಗಲಿಲ್ಲ (ಆದಿಕಾಂಡ 22:7).
- ಯಜ್ಞವೇದಿಯನ್ನು ಕಟ್ಟಿದನು (ಆದಿಕಾಂಡ 22:9).
- ದೇವರ ಅಪ್ಪಣೆಯ ಮೇರೆಗೆ ಯಜ್ಞವೇದಿಯ ಮೇಲೆ ಕಟ್ಟಿಗೆಯನ್ನು ಇಟ್ಟನು, ಇಸಾಕನನ್ನು ಕಟ್ಟಿದನು, ವೇದಿಯ ಮೇಲಿದ್ದ ಕಟ್ಟಿಗೆಯ ಮೇಲೆ ಅವನನ್ನು ಇರಿಸಿದನು (ಆದಿಕಾಂಡ 22:9).
- ಇಸಾಕನನ್ನು ಕೊಲ್ಲಲು ತನ್ನ ಕೈಯನ್ನು ಮೇಲಕ್ಕೆ ಎತ್ತಿದನು (ಆದಿಕಾಂಡ 22:10).

ಆದದರಿಂದ, ದೇವದೂತನು ಅಬ್ರಹಾಮನಿಗೆ, *ಏಕೆ* ದೇವರು ಅವನ ಮೂಲಕ ಭೂಲೋಕದವರೆಲ್ಲರನ್ನು ಆಶೀರ್ವದಿಸುವನು ಎಂದು ಹೇಳಿದನು. ಅವನ ಸಂತಾನ ವಾದ [ಯೇಸು ಕ್ರಿಸ್ತನ; ಗಲಾತ್ಯ 3:16]: ''ಮೂಲಕ ಭೂಮಿಯ ಸಕಲ ಕುಟುಂಬಗಳನ್ನು ಆಶೀರ್ವದಿಸುವೆನು ಎಂದು ಹೇಳಿದನು'' (ಆದಿಕಾಂಡ 22:18ಬಿ). ದೇವರ ಬಯಕೆಯಂತೆ, ಅಬ್ರಹಾಮನು ಎಲ್ಲವನ್ನು ಮಾಡಿದನು. ದೇವರು ನಿರ್ದಿಷ್ಟವಾದ ಕಾರ್ಯವನ್ನು ಮತ್ತು ಅದರ ಕಾರ್ಯಪಾಲನೆಯನ್ನು ಬಯಸುವನು. ಅಬ್ರಹಾಮನು ನೆರವೇಲಿಸಬೇಕಿದ್ದ ದೇವರ

ಅಗತ್ಯತೆಗಳನ್ನು ಅರಿತಿದ್ದನು:

- ಯಜ್ಞಕ್ಕೆ ಬೇಕಾದ ವ್ಯಕ್ತಿಯನ್ನು - ಇಸಾಕ (ಆದಿಕಾಂಡ 22:2).
- ಯಜ್ಞವರ್ಪಿಸ ಬೇಕಾದ ಸ್ಥಳವನ್ನು - ಮೋರಿಯಾ ಬೆಟ್ಟ (ಆದಿಕಾಂಡ 22:2).
- ಯಜ್ಞ ಅರ್ಪಿಸುವವನನ್ನು - ಅಬ್ರಹಾಮ (ಆದಿಕಾಂಡ 22:2).
- ಯಜ್ಞ ಮಾಡುವದನ್ನು - ಅದನ್ನು ಮಾಡಲು ಬೇಕಾದ ಸ್ಥಿರಮನಸ್ಸನ್ನು.

ದೇವರು ನೇರವಾಗಿ ನೇಮಿಸದೆ, ಇದ್ದ ವಿಷಯಗಳ ಅಗತ್ಯತೆಯನ್ನು ತಿಳುಕೊಂಡಿದ್ದನು, ದೇವರ ನೇಮವನ್ನು ಪಾಲಿಸಲು ಅವುಗಳ ಅಗತ್ಯತೆ ಇತ್ತು:

- ಸಾಗಾಟಕ್ಕೆ ಅಗತ್ಯವಿದ್ದ ಕತ್ತೆ (ಆದಿಕಾಂಡ 22:3).
- ಬೆಂಕಿಗಾಗಿ ಕಟ್ಟಿಗೆ (ಆದಿಕಾಂಡ 22:3).
- ಯಜ್ಞದ ಬೆಂಕಿಯನ್ನು ಹೊತ್ತಿಸಲು ಅವಶ್ಯವಿದ್ದ ಬೆಂಕಿ (ಆದಿಕಾಂಡ 22:6).
- ಯಜ್ಞಮಾಡಲು ಕತ್ತಿ (ಆದಿಕಾಂಡ 22:6).
- ಯಜ್ಞದ ಮನುಷ್ಯನ ಅನುಮತಿ.

ಅದರಲ್ಲಿ ಅಡಗಿರುವ ಎಲ್ಲವನ್ನು ನಾವು ಅರಿಯುವವರಾಗಿದ್ದರು, ಅಬ್ರಹಾಮನ ನಿದರ್ಶನದಂತೆ, ನಾವುಗಳು ದೇವರಿಗೆ ವಿಧೇಯರಾಗಲು ಮುಂದಾಗಬೇಕು.

## ಯೆರಿಕೋವಿನಲ್ಲಿದ ಯೆಹೋಶುವನು

ನಂತರ ಇಸ್ರಾಯೇಲ್ಯರ ಚರಿತ್ರೆಯಲ್ಲಿ, ದೇವರು ಯೆಹೋಶುವನಿಗೆ, ಯೆರಿಕೋಪಟ್ಟಣವನ್ನು ವಶಪಡಿಸಿಕೊಳ್ಳುವ ಕುರಿತು ಸಲಹೆಗಳನ್ನು ನೀಡಿದನು (ಯೆಹೋಶುವ 6:3-5). ಯುದ್ಧ ಭಟರೆಲ್ಲಾ ಆರು ದಿವಸಗಳ ಕಾಲ ದಿನಕ್ಕೆ ಒಂದು ಸಾರಿ ಪಟ್ಟಣವನ್ನು ಸುತ್ತಲಿ (ವಚನ 3). ಏಳು ಮಂದಿ ಯಾಜಕರು ಕೊಂಬುಗಳನ್ನು ಹಿಡಿದುಕೊಂಡು ಮಂಜೂಷದ ಮುಂದೆ ನಡೆಯಲಿ (ವಚನ 4). ಏಳನೆಯ ದಿವಸ ನೀವು ಪಟ್ಟಣವನ್ನು ಏಳು ಸಾರಿ ಸುತ್ತಬೇಕು (ವಚನ 4) ಯಾಜಕರು ಕೊಂಬುಗಳನ್ನು ಊದಬೇಕು, ಅವರ ದೀರ್ಘವಾಗಿ ಊದುವ ಕೊಂಬಿನ ಧ್ವನಿಯು ಕೇಳಿಸುತ್ತಲೇ ನೀವೆಲ್ಲರು ಮಹತ್ತರವಾಗಿ ಅರ್ಭಟಿಸಿರಿ. ಆಗ ಪಟ್ಟಣದ ಗೋಡೆಯು ತಾನೇ ಬಿದ್ದು ಹೋಗುವುದು ಎಂದು ದೇವರು ತಿಳಿಸಿದನು (ವಚನ 5).

ಯೆಹೋಶುವ ಮತ್ತು ಅವನ ಜನರು ದೇವರ ಮಾತಿನ ಮೇಲೆ ಭರವಸವಿಟ್ಟು ಆತನು ಹೇಳಿದಂತೆಯೇ ಮಾಡಿದರು (ಯೆಹೋಶುವ 6:8-20). "ನಂಬಿಕೆಯಿಂದಲೇ ಅವರು ಏಳು ದಿವಸಗಳ ತನಕ ಯೆರಿಕೋ ಪಟ್ಟಣದ ಗೋಡೆಗಳನ್ನು ಸುತ್ತಿದ ಮೇಲೆ ಅವು ಬಿದ್ದವು" (ಇಬ್ರಿಯ 11:30). ಅವನ ನಂಬಿಕೆಯು ದೇವರಲ್ಲಿ ದೃಢವಾಗಿತ್ತು. ಆ ನಂಬಿಕೆಯು ಅವರನ್ನು ವಿಧೇಯತ್ವಕ್ಕೆ *ನಡೆಸಿತ್ತು.* ದೇವರ ಯೋಜನೆಯು ಈ ರೀತಿ ಕಾರ್ಯಮಾಡುವದಿತ್ತು ಎಂದು ಭಾವಿಸಿರಲಿಲ್ಲ. ದೇವರ ವಾಕ್ಯವನ್ನು ಒಪ್ಪಿಕೊಂಡರು, ನಂಬಿದರು, ಅದಕ್ಕೆ ಸರಿಯಾಗಿ ಪ್ರತಿಕ್ರಿಯಿಸಿದರು.

## ರಾಹಾಬಳು

ಇಸ್ರಾಯೇಲ್ಯರ ಗೂಡಾಚಾರರು ಯೆರಿಕೋವಿನಿಂದ ತಪ್ಪಿಸಿಕೊಳ್ಳಲು ರಾಹಾಬಳು ಸಹಾಯಿಸಿದಳು. ಅದಕ್ಕೆ ಬದಲಾಗಿ, ಪಟ್ಟಣವು ನಾಶವಾಗುವಾಗ ತನ್ನನ್ನು ತನ್ನ ಕುಟುಂಬದವರನ್ನು ಸಂರಕ್ಷಿಸಬೇಕು. ಎಂದು ಮನವಿ ಮಾಡಿದಳು. ಗೂಡಾಚಾರರಿಗೆ ಆಕೆಯು

ವಿಧೇಯಳಾದರೆ ಮಾತ್ರ, ಅವಳು ರಕ್ಷಿಸಲ್ಪಡುವಳು ಎಂದು ಅವರು ಸೂಚಿಸಿದ್ದರು (ಯೆಹೋಶುವ 2:17-20). ಗೂಡಾಚಾರರು ತಪ್ಪಿಸಿಕೊಂಡ ಕಿಟಕಿಗೆ ಅವಳು ಕೆಂಪುದಾರವನ್ನು ಕಟ್ಟಬೇಕು ಎಂದು ಅವರು ತಿಳಿಸಿದ್ದರು, ನಂತರ ತನ್ನ ಸಂಬಂಧಿಕರನ್ನು ತನ್ನ ಮನೆಗೆ ಕರೆಸಿಕೊಳ್ಳ ಬೇಕೆಂದು ಆಕೆಗೆ ಸೂಚಿಸಿದರು. ಈ ವಿಚಾರವನ್ನು ಆಕೆಯು ಯಾರಿಗೂ ತಿಳಿಸಬಾರದಿತ್ತು.

ಅವರ ಸಲಹೆಯಂತೆ ಆಕೆಯು ಮಾಡಿದ್ದರಿಂದ, ಯೆರಿಕೋ ಪಟ್ಟಣದವರು ನಾಶವಾ ಗುವಾಗ, ಅವರೊಂದಿಗೆ ಇವಳು ಮತ್ತು ಈಕೆಯ ಮನೆಯವರು ನಾಶವಾಗಲಿಲ್ಲ (ಯೆರೆಮೀಯ 6:22, 23).

## ಕುರುಡನಾದ ಒಬ್ಬ ಮನುಷ್ಯನು

ಯೋಹಾನ 9:1ರಲ್ಲಿ ವಿಧೇಯನಾದ ಮತ್ತೊಬ್ಬ ವ್ಯಕ್ತಿಯ ಕುರಿತು ನೋಡುತ್ತೇವೆ. ಅವನು ಹುಟ್ಟು ಕುರುಡನಾಗಿದ್ದನು. ಯೇಸು ಅವನನ್ನು ನೋಡಿದಾಗ, ತನ್ನ ಉಗುಳಿನಿಂದ ಮಣ್ಣನ್ನು ಕಲಿಸಿ, ಅವನ ಕಣ್ಣುಗಳಿಗೆ ಹಚ್ಚಿದನು. ನಂತರ ಅವನಿಗೆ “ಹೋಗಿ ಶಿಲೋವದ ಕೊಳದಲ್ಲಿ ತೊಳೆದುಕೋ ಅಂದನು (ಕಳುಹಿಸಲ್ಪಟ್ಟವನು ಎಂಬ ಅನುವಾದ) ಅವನು ತೊಳಕೊಂಡಾಗ, ಅವನ ಕಣ್ಣುಗಳು ಬಂದವು” (ಯೋಹಾನ 9:7).

ಯೇಸುವಿನ ಸಲಹೆಗಳನ್ನು ಪಾಲಿಸುವುದೇ ವಿಧೇಯತೆಯಾಗಿದೆ. ಕುರುಡನು ಯೇಸುವನ್ನು ನಂಬಿ, ಆತನ ವಾಕ್ಯಗಳಿಗೆ ವಿಧೇಯನಾದನು. ಅವನು ಎಲ್ಲಿಗೆ ಹೋಗ ಬೇಕಿತ್ತು ಎಂಬುದನ್ನು ಅರಿತಿದ್ದನು, ಅಲ್ಲಿ ಹೋದ ನಂತರ ಏನು ಮಾಡಬೇಕೆಂದು ತಿಳಿದಿದ್ದನು ಅವನು ಏಕೆ ಅಲ್ಲಿ ತೊಳೆದು ಕೊಳ್ಳಬೇಕೆಂದು ಬಲ್ಲವನಾಗಿದ್ದನು. ವಿಧೇಯನಾದಾಗ, ದೃಷ್ಟಿಯನ್ನು ಹೊಂದಿದನು.

“ಯೇಸು ಅವನಿಗೆ, ನಿನ್ನ ಕಣ್ಣಿನ ಮೇಲಿರುವ ಮಣ್ಣನ್ನು ಕೈಯಿಂದ ಒರಸಿ ನಂತರ ತೊಳೆದು ಕೋ ಎಂದು ಹೇಳಿರಲಿಲ್ಲ” ಅಥವಾ ಸಾಬೂನನ್ನು ಉಪಯೋಗಿಸಿ ತೊಳೆ ಯ ಬಾರದು ಎಂದು ಸಹ ಹೇಳಿರಲಿಲ್ಲ. “ಶಿಲೋವದ ಕೊಳವನ್ನು ಹೊರತುಪಡಿಸಿ ಬೇರೆ ಕೊಳಕ್ಕೆ ಹೋಗಬಾರದು ಎಂದು” ಆದೇಶಿಸಿರಲಿಲ್ಲ, ಅಥವಾ “ಬೇರೆಯಾರು ಸಹ ಆ ಮಣ್ಣನ್ನು ತೊಳೆಯ ಬಾರದು ಎಂದು ಹೇಳಿರಲಿಲ್ಲ.”

ಅವನು ಮಾಡಬೇಕಾದದ್ದನ್ನು ಯೇಸು ನಿರ್ದಿಷ್ಟವಾಗಿ ತಿಳಿಸಿದ್ದನು. ಅವನು ಏನನ್ನು ಮಾಡಬಾರದು ಎಂದು ಯೇಸು ಹೇಳಿರಲಿಲ್ಲ. ನಮ್ಮ ಸೇವೆಯಲ್ಲಿಯೂ, ಈ ವಿಷಯಗಳೇ ಅಡಕವಾಗಿರುತ್ತದೆ, ಆತನಿಗೆ ಅಗತ್ಯವಿರುವದನ್ನು ಮಾತ್ರ ಸೂಚಿಸಿರುತ್ತಾನೆ, ಅದರೆ ಇತರೆ ಕಾರ್ಯಗಳನ್ನು ತಿಳಿಸಿರುವದಿಲ್ಲ. ಆತನು ತಿಳಿಸಿರುವದನ್ನು ಮಾಡುವಂಥದೇ ವಿಧೇಯತೆಯಲ್ಲಿ ಅಡಕವಾಗಿರುತ್ತದೆ. ಅದನ್ನು ಬಿಟ್ಟು ಇತರೆ ಕಾರ್ಯಗಳನ್ನೂ ಮಾಡುವುದು, ದೇವರ ಅಧಿಕೃತ ಕಾರ್ಯಗಳಿಗೆ ತದ್ವಿರುದ್ಧವಾಗಿರುತ್ತದೆ.

## ಅವಿಧೇಯತೆಯ ಪರಿಣಾಮಗಳು

ಅವಿಧೇಯತೆಯ ಕುರಿತಾಗಿಯೂ ಬೈಬಲ್ ನಿದರ್ಶನಗಳನ್ನು ನೀಡಿರುತ್ತದೆ. ಅದರ ಭಯಾನಕ ದಷ್ಪರಿಣಾಮಗಳನ್ನು ನಾವು ನೋಡುತ್ತೇವೆ. ಅರಸನಾದ ಸೌಲನ ನಿದರ್ಶನವೇ ಒಂದು ಆಘಾತದ ಸಾಕ್ಷಿಯಾಗಿದೆ.

ಅರಸನಾದ ಸೌಲನ ಎರಡು ಅಪರಾಧಗಳನ್ನು ಗ್ರಂಥಗಳಲ್ಲಿ ದಾಖಲು ಮಾಡಲಾಗಿದೆ. ಮೊದಲನೆಯದಾಗಿ, ಯಾಜಕರು ಮಾತ್ರ ಸಮರ್ಪಿಸಬೇಕಾದ ಯಜ್ಞವನ್ನು ಸೌಲನು ಸಮರ್ಪಿಸಿದನು. ಸಮುವೇಲನಿಗಾಗಿ ಏಳು ದಿವಸಗಳ ಕಾಲ ಕಾದನು, ಆದರೆ ಪ್ರವಾದಿಯು ಸರಿಯಾದ ಸಮಯ ಪಾಲನೆ ಮಾಡಲಿಲ್ಲ. ಪೌಲನ ಯುದ್ಧ ಭಟರು ಚದರಿಹೋಗುವದಕ್ಕೆ ಪ್ರಾರಂಭಿಸಿದಾಗ, ಸೌಲನು ನ್ಯಾಯಬದ್ದವೆಂದು ತಿಳಿದ ಕಾರ್ಯವನ್ನು ಮಾಡಿದನು: ಅವನು

ದೇವರಿಗೆ ಯಜ್ಞವನ್ನು ಅರ್ಪಿಸಿದನು. ಹೇಗೂ ಅವನು ಯಾಜಕನಾಗದೇ ಇದ್ದದ್ದರಿಂದ, ಯಜ್ಞವನ್ನು ಅರ್ಪಿಸುವ ಅಧಿಕಾರವನ್ನು ಅವನು ಹೊಂದಿರಲಿಲ್ಲ. ಅವನು ಯಜ್ಞವನ್ನು ಅರ್ಪಿಸಿ ಮುಗಿಸಿದ ತರುವಾಯ, ಸಮುವೇಲನು ಅವನನ್ನು ಸಂಧಿಸಿ, “ನೀನು ಬುದ್ಧಿಹೀನ ಕಾರ್ಯವನ್ನು ಮಾಡಿದೆ, ನೀನು ನಿನ್ನ ದೇವರಾದ ಯೆಹೋವನ ಆಜ್ಞೆಯನ್ನು ಕೈ ಕೊಳ್ಳಲಿಲ್ಲ ...” (1 ಸಮುವೇಲ 13:13) ಅಂದನು.

ಯಾಜಕನ ಸ್ಥಾನವನ್ನು ಆಕ್ರಮಿಸಿದ್ದು, ಅವನ ಮೊದಲ ತಪ್ಪು ಆರೋನನ ಸಂತಾನದವರು ಮಾತ್ರ ಯಾಜಕ ವೃತ್ತಿಯನ್ನು ಮಾಡಬೇಕಿತ್ತು (ವಿಮೋಚನಕಾಂಡ 28:1, 4; 29:44; 30:30; ಯಾಜಕಕಾಂಡ 1:8, 11; 2:2). ಲೇವಿಯರನ್ನು ಯಜ್ಞದ ಕೆಲಸಗಳಿಗೆ ಆಯ್ದುಕೊಂಡದ್ದರಿಂದ, ಸೌಲನು, (ಬೆನ್ಯಾಮೀನ್‌ನ ವಂಶದವನು) ಸರ್ವಾಂಗ ಹೋಮವನ್ನು ಅರ್ಪಿಸುವ ಅಧಿಕಾರವನ್ನು ಹೊಂದಿರಲಿಲ್ಲ.

ಸೌಲನು ತನ್ನ ಕ್ರಿಯೆಗಳು ಸರಿಯಾದವು ಎಂದು ತಿಳಿದಿದ್ದನು. ಅವನು ಅರ್ಪಿಸುವ ಕಾರ್ಯವನ್ನು ಅವನು ಆಶಿಸಿ ಅದನ್ನು ಮಾಡಲಿಲ್ಲ, ಅಂಥಹ ಆರಾಧನೆಯಲ್ಲಿ ಅವನು ಸಫಲನಾಗದೆ ಇರಬಹುದೆಂದು ಆಲೋಚಿಸಲಿಲ್ಲ, ಆದರೆ ಆ ಪರಿಸ್ಥಿತಿಯಲ್ಲಿ ಅವನ ಕ್ರಿಯೆಯು ಉತ್ತಮವಾದದ್ದು ಎಂದು ಭಾವಿಸಿದನು. ಈ ಕ್ರಿಯೆಯಿಂದ ಅವನು ದೇವರ ಸಮರ್ಪಿಸುವ ವ್ಯಕ್ತಿಯು ಅವನಾಗಿರಲಿಲ್ಲ, ದೇವರ ಅನುಮತಿ ಇಲ್ಲದೆ ಇದನ್ನು ಮಾಡಿದನು.

ಅವನ ಎರಡನೆಯ ತಪ್ಪು ಸಹ ಗಂಭೀರವಾದದ್ದು ಅಮಾಲೇಕ್ಯರನ್ನು ಸಂಪೂರ್ಣ ನಾಶಮಾಡಬೇಕೆಂದು ಅಪ್ಪಣೆ ಹೊಂದಿದ್ದನು, ಅವರಾಗಲಿ, ಅಥವಾ ಅವರ ಪ್ರಾಣಿಗಳಾಗಲೀ ಜೀವದಿಂದ ಇರಬಾರದಿತ್ತು. ಸೌಲನ ಸೈನ್ಯವು ಜಯಹೊಂದಬಹುದಾಗಿತ್ತು; ಆದರೆ ಅವನು ಮತ್ತು ಅವನ ಜನರು ಅರಸನಾದ ಆಗಾಗನನ್ನು ಜೀವದಿಂದ ಇಟ್ಟಿದ್ದರು, ಅವನೊಂದಿಗೆ ಉತ್ತಮವಾದ ಧನ ಕುರಿಗಳನ್ನು ಮತ್ತು ಉತ್ತಮವಾದದ್ದನ್ನು ಉಳಿಸಿಕೊಂಡಿದ್ದರು (1 ಸಮುವೇಲ 15:1-9). ಆ ಪ್ರಾಣಿಗಳನ್ನು ಯಜ್ಞವಾಗಿ ಸಮರ್ಪಿಸಲು ಮುಂದಾದನು.

ಸಮುವೇಲನು ಬಂದಾಗ, ಸೌಲನು ಅವನಿಗೆ, “ನಾನು ಕರ್ತನ ಆಜ್ಞೆಯನ್ನು ಪಾಲಿಸಿರುವೆನು ಅಂದನು ನಂತರ ಸಮುವೇಲನು ನಾನು ಕೇಳುತ್ತಿರುವ ಈ ಕುರಿದನಗಳ ಶಬ್ದವೇನು ಎನ್ನಲು?” ಜನರು ಇದನ್ನು ಕರ್ತನಿಗೆ ಸಮರ್ಪಿಸಲು ಆಶಿಸಿದರು ಅಂದನು.

ವಿದೇಯತೆಗೆ ದೇವರ ಪ್ರತಿಕ್ರಿಯೆಯನ್ನು ಸಮುವೇಲನು ಪ್ರಕಟಿಸಿದನು:

> ಅದಕ್ಕೆ ಸಮುವೇಲನು - ಯೆಹೋವನು ವಿಧೇಯತ್ವಕ್ಕೆ ಮೆಚ್ಚುವಷ್ಟು ಯಜ್ಞ ಹೋಮಗಳಿಗೆ ಮೆಚ್ಚುತ್ತಾನೋ? ಯಜ್ಞವನ್ನರ್ಪಿಸುವದಕ್ಕಿಂತ ಮಾತು ಕೇಳುವದು ಉತ್ತಮವಾಗಿದೆ; ಟಗರುಗಳ ಕೊಬ್ಬಿಗಿಂತ ವಿಧೇಯತ್ವವು ವಿಶೇಷವಾಗಿದೆ. ಅವಿಧೇಯತ್ವವು ಮಂತ್ರತಂತ್ರಗಳಷ್ಟೇ ಕೆಟ್ಟದ್ದಾಗಿರುವದು; ಹಟವು ಮಿಥ್ಯಾಭಕ್ತಿಗೂ ವಿಗ್ರಹರಾಧನೆಗೂ ಸಮಾನ ವಾಗಿರುವುದು (1 ಸಮುವೇಲ 15:22, 23).

ಸೌಲನ ಅರಿಕೆಯು ಸರಿಯಾಗಿಯೇ ಇತ್ತು ಅವನು, “ನಾನು ಪಾಪ ಮಾಡಿದೆನು ಅಂದನು; ನಿನ್ನ ಮತ್ತು ಕರ್ತನ ಆಜ್ಞೆಗಳನ್ನು ಮೀರಿ ಪಾಪಮಾಡಿದ್ದೇನೆ; ಜನರಿಗೆ ಹೆದರಿ ಅವರ ಮಾತನ್ನು ಕೇಳಿದೆನು” (1 ಸಮುವೇಲ 15:24). ಆತನು ರಾಜ್ಯವನ್ನು ನಿನ್ನಿಂದ ಕಿತ್ತುಕೊಂಡು ಬೇರೆಯವನಿಗೆ ನೀಡುವನು ಅಂದನು (1 ಸಮುವೇಲ 28:17, 18).

ಸೌಲನು ಮಾಡಬೇಕಾದ ವಿಷಯವನ್ನು ದೇವರು ಸ್ಪಷ್ಟವಾಗಿ ತಿಳಿಸಿದ್ದನು. ಸಾಮಾನ್ಯವಾಗಿ, ಸೌಲ ಮತ್ತು ಅವನ ಜನರು “ಒಳ್ಳೆಯ” ಭಾವನೆಯನ್ನು ಹೊಂದಿದ್ದರು. ಅವರು ಸರ್ವಾಂಗ ಹೋಮದ ಮೂಲಕ ಆರಾಧನೆ ಮಾಡಲು ಆಶಿಸಿದ್ದರು, ದೇವರ ಇಚ್ಛೆಯ ಯಜ್ಞವನ್ನೆ ಅರ್ಪಿಸುವದಕ್ಕೆ ಇದ್ದರು, ಮಂದೆಯಲ್ಲಿ ಉತ್ತಮವಾದದ್ದನ್ನು ತಂದಿದ್ದರು. ಉಳಿದ ಮಂದೆಯನ್ನು ಯಜ್ಞಮಾಡುವದರಿಂದ ಉಳಿದೆಲ್ಲವುಗಳನ್ನು ನಾಶಮಾಡವೆವು ಎಂದು

ತಿಳಿದಿದ್ದರು. ತಮ್ಮ ಸ್ವಂತ ಉಪಯೋಗಕ್ಕಾಗಿ ಅದನ್ನು ಉಳಿಸಿಕೊಳ್ಳಲಿಲ್ಲ. ಅದನ್ನು ದೇವರಿಗೆ ಅರ್ಪಿಸುವದರಿಂದ, ಅವರು ದೇವರ ಮೆಚ್ಚುಗೆಗೆ ಪಾತ್ರರಾಗುವರು ಎಂದು ತಿಳಿದಿದ್ದರು. ಮಾನವನ ಆಲೋಚನೆಯ ಪ್ರಕಾರ ಅವರು ಉತ್ತಮವಾದ ನಿರ್ಣಯವನ್ನು ಮಾಡಿರುವರು ಎಂದು ತಿಳಿದಿದ್ದರು.

ದೇವರು ತನ್ನ ಪ್ರತಿಕ್ರಿಯೆಯ ಮೂಲಕ. ಅವರ ಆಲೋಚನೆಗಳನ್ನು ತಿರಸ್ಕರಿಸಿದನು. ನಾವು ಆರಾಧನೆ ಮಾಡುವಾಗ, ಸರಿಯಾದ ಆಲೋಚನೆಯನ್ನು ಹೊಂದಿರಬೇಕು ಎಂದು ಈ ಘಟನೆಯ ನಮಗೆ ನೆನಪುಮಾಡುತ್ತದೆ. ಆರಾಧನೆ ಪ್ರಾಮುಖ್ಯವಾದದ್ದೆ, ಆದರೆ *ನಮ್ಮ ಪ್ರಥಮ ಆದ್ಯತೆಯು ವಿಧೇಯತೆಯೇ.* ದೇವರ ಬಯಕೆಗೆ ಹೋಲುವ ಆರಾಧನೆಯನ್ನು ನಾವು ಸಲ್ಲಿಸಬೇಕು.